2017 ಕ.ತೀ.ವ. 1030

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀಮತಿ ಓಬಮ್ಮ ಕೋಂ, ಲೇಟ್ ಬೋರಯ್ಯ ಮತ್ತು ಇತರರು –ವಿರುದ್ಧ–
ಶ್ರೀ ಬೋರಯ್ಯ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಈ ನಿಯತ ಎರಡನೇ ಅಪೀಲನ್ನು ಸಲ್ಲಿಸಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – 54ನೇ ಪ್ರಕರಣ.

ಇಲ್ಲಿನ ವಾದಿಗಳು ತಮ್ಮ ಸಂಪದದ ವಿಭಾಗ ಹಾಗೂ ಹಿಸ್ಸೆಗಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಅಂತಿಮ ಡಿಕ್ರಿ ನ್ಯಾಯಾಲಯವು ನೀಡಿದ ತೀರ್ಪು ಹಾಗೂ ಆದೇಶವನ್ನು ಪ್ರಶ್ನಿಸಿ ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ತಿದ್ದುಪಡಿಯ ಅನುಸಾರವಾಗಿ ನ್ಯಾಯಾಲಯವನ್ನು ಹೊರತುಪಡಿಸಿ ಇತರೆ ಯಾರೇ ಪ್ರಾಧಿಕಾರಿ ಹಿಸ್ಸೆ ಹಂಚಿಕೆಯನ್ನು ಮಾಡಲಾಗುವುದಿಲ್ಲವಾದ್ದರಿಂದ ಹೊಸದಾಗಿ ಪ್ರಕರಣವನ್ನು ಪರಿಗಣಿಸುವಂತೆ ಅಂತಿಮ ಡಿಕ್ರಿ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

ಅಪೀಲುದಾರರ ಪರ : ಶ್ರೀ ಬಿ.ಎಂ. ಸಿದ್ದಪ್ಪ – ವಕೀಲರು
ಸಿ/1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಶಶಿಧರ .ಆರ್ – ವಕೀಲರು

* ಆರ್.ಎಸ್.ಎ. ಸಂ.1595/2013, ದಿನಾಂಕ: 11ನೇ ಜುಲೈ, 2016.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರ ಮುಂದೆ ದಾಖಲು ಮಾಡಿದ್ದ ಎಫ್.ಡಿ.ಪಿ. ಸಂ.1/2009 ರಲ್ಲಿ ಮಾಡಿದ ಅಂತಿಮ ಡಿಕ್ರಿ ವ್ಯವಹರಣೆಗಳ ದಿನಾಂಕ 5.12.2012ನ್ನು ಕಮೀಷನರ್ ನಕ್ಷೆಯ ನಿಬಂಧನೆಗಳಲ್ಲಿರುವಂತೆ ಪ್ರಾರಂಭಿಕ ಡಿಕ್ರಿಯನ್ನು ಅನುಸರಿಸಿ ಅಂತಿಮ ಡಿಕ್ರಿಯನ್ನು ಪಡೆದುಕೊಳ್ಳಲು ಕಛೇರಿಗೆ ನಿರ್ದೇಶಿಸಿ ಈ ಅರ್ಜಿಯನ್ನು ಅಂಗೀಕರಿಸಿ, ಹಿರಿಯ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರ ಮುಂದೆ ದಾಖಲು ಮಾಡಿದ್ದ ಆರ್.ಎ.ಸಂ.7/2013 ರಲ್ಲಿ ಮಾಡಿದ ತೀರ್ಪು ಮತ್ತು ಡಿಕ್ರಿ ದಿನಾಂಕ 26.8.2013ರ ವಿರುದ್ಧ ತೀರ್ಪುಋಣಿಯು ಈ ಅಪೀಲನ್ನು ಸಲ್ಲಿಸಿದ್ದಾರೆ.

2. ಮೂಲ ದಾವಾ ಸಂ.248/1975ರಲ್ಲಿ ವಾದಿಗಳಾಗಿರುವ ಇಲ್ಲಿನ ಪ್ರತ್ಯರ್ಜಿದಾರರು, ವಿಭಾಗ ಮತ್ತು ಅರ್ಧ ಭಾಗದ ಪ್ರತ್ಯೇಕ ಸ್ವಾಧೀನಕ್ಕಾಗಿ ದಾವೆಯನ್ನು ದಾಖಲು ಮಾಡಿದ್ದರು. ಈ ದಾವೆಯು, ಡಿಕ್ರಿಯಾಗಿದ್ದು, ಆರ್.ಎ. 24/1981ರಲ್ಲಿ ಅಪೀಲಿನಲ್ಲಿರುವಂತೆ ಸ್ಥಿರೀಕರಿಸಲಾಗಿತ್ತು. ಕೆಳ ನ್ಯಾಯಾಲಯಗಳ ಸದರಿ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ, ಅದರಲ್ಲಿ ಪ್ರತ್ಯರ್ಜಿದಾರರಾಗಿರುವ ಪ್ರಸ್ತುತ ತೀರ್ಪುಋಣಿಗಳಿಂದ, ಆರ್.ಎಸ್.ಎ. ಸಂ.727/1991ನ್ನು ದಾಖಲು ಮಾಡಲಾಗಿತ್ತು. ನಿಗದಿತ ಸಮಯದೊಳಗೆ ದಾಖಲೆಗಳನ್ನು ದಾಖಲು ಮಾಡದೇ ಇರುವುದರಿಂದ, ಸದರಿ ಅಪೀಲನ್ನು, ದಿನಾಂಕ 2.6.1998 ರಂದು ವಜಾಗೊಳಿಸಲಾಗಿತ್ತು.

3. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಅನುಸರಿಸಿ, ಅಂತಿಮ ಡಿಕ್ರಿಯನ್ನು ಮಾಡಲು ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣವನ್ನು ಓದಿಕೊಂಡು ಕ್ರಮಾದೇಶ 20 ನಿಯಮ 18ರ ಅಡಿಯಲ್ಲಿ ಡಿಕ್ರಿದಾರರು, ಎಫ್.ಡಿ.ಪಿ. 1/2009ನ್ನು ದಾಖಲು ಮಾಡಿದ್ದರು. ದಾಖಲೆ ಮೇಲಿನ ಇಡೀ ಸಾಮಗ್ರಿಯನ್ನು

ಪರಿಗಣಿಸಿದ ತರುವಾಯ ಮತ್ತು ಅಗತ್ಯ ಅಂಶಗಳನ್ನು ರೂಪಿಸಿದ ತರುವಾಯ, ಪ್ರಕರಣದ ಪತ್ರಗಳನ್ನು ಪರಿಶೀಲಿಸಿದ ತರುವಾಯ, ಪ್ರಾರಂಭಿಕ ಡಿಕ್ರಿಯ ಪ್ರಕಾರ ಕಾರ್ಯನಿರ್ವಹಿಸಲು ನ್ಯಾಯಾಲಯ ಕಮೀಷನರ್‌ರವರನ್ನು ನೇಮಿಸಲಾಗಿತ್ತು. ಅವರು, ದಾವೆಯ ಸ್ವತ್ತುಗಳಿಗೆ ಭೇಟಿ ನೀಡಿದ್ದಾರೆ ಮತ್ತು ಪ್ರಾರಂಭಿಕ ಡಿಕ್ರಿಯ ಪ್ರಕಾರ ಕಮೀಷನರ್ ವಾರಂಟು ನೀಡಿದ್ದಾರೆ. ಅದಕ್ಕೂ ಮುಂಚೆಯೇ ಸಂಬಂಧಪಟ್ಟ ಪಕ್ಷಕಾರರಿಗೆ ನೋಟೀಸ್ ನೀಡಿದ್ದಾರೆ ಮತ್ತು ಆತನು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದಾರೆ. ಕಮೀಷನರ್‌ರು ವರದಿಯನ್ನು ದಾಖಲಿಸಿದ ತರುವಾಯ, ಅರ್ಜಿದಾರರು, ಕಮೀಷನ್‌ರರ ವರದಿಗೆ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದರೆ, ಪ್ರತ್ಯರ್ಜಿದಾರರು, ಕಮೀಷನರ್‌ರವರ ವರದಿಗೆ ಆಕ್ಷೇಪಣೆಗಳನ್ನು ದಾಖಲು ಮಾಡಿದ್ದಾರೆ. ಹಾಗಾಗಿ, ಸಮನ್ಸ್‌ಗಳನ್ನು, ಕೋರ್ಟು ಕಮೀಷನರ್ ಹೊರಡಿಸಿದ್ದಾರೆ ಮತ್ತು ಆತನನ್ನು, ಸಿಡಬ್ಲ್ಯೂ.1 ಆಗಿ ಪರೀಕ್ಷಿಸಲಾಗಿದೆ. ಕಮೀಷನರ್ ವರದಿಯನ್ನು ನಿಶಾನೆ ಸಿ1 ಎಂದು ಗುರುತು ಮಾಡಲಾಗಿದೆ.

4. ಸದರಿ ವ್ಯವಹರಣೆಗಳ ಅವಧಿಯಲ್ಲಿ, ಅರ್ಜಿದಾರರು, 'ಸಿ' ಷೆಡ್ಯೂಲ್ ಸ್ವತ್ತಿನ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಅಂತಿಮ ಡಿಕ್ರಿ ವ್ಯವಹರಣೆಗಳಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರು, 'ಪ್ರಾರಂಭಿಕ ಡಿಕ್ರಿಯ ಪ್ರಕಾರ ದಾವೆಯ ಸ್ವತ್ತುಗಳನ್ನು ಕೋರ್ಟು ಕಮೀಷನರ್ ವಿಭಾಗ ಮಾಡಿದ್ದಾರೆಯೆಂದು ನಿರ್ಣಯಿಸಿ ದಾಖಲಿಸಿದ್ದಾರೆ.' ಡಿಕ್ರಿಯನ್ನು ಕಾರ್ಯಗತಗೊಳಿಸಲು ಉದ್ದೇಶಪೂರ್ವಕವಾಗಿ ತಪ್ಪಿಸಲು ಪ್ರತ್ಯರ್ಜಿದಾರರು ಪ್ರಯತ್ನಿಸಿದ್ದಾರೆಂಬುದು ಕಂಡುಬರುತ್ತದೆ. ಪ್ರತ್ಯರ್ಜಿದಾರರು ನಡೆಸಿರುವುದು, ಈ ನ್ಯಾಯಾಲಯ ಮಾಡಿದ ಡಿಕ್ರಿಯ ಉಲ್ಲಂಘನೆಯಲ್ಲದೆ ಮತ್ತೇನೂ ಅಲ್ಲ. ಹಾಗಾಗಿ, ಇದು ಅನುಮತಿಯವಲ್ಲ ಮತ್ತು ತಾಳಿಕೊಳ್ಳುವಂಥದ್ದಲ್ಲ. ಯಾವುದೇ ಕಾನೂನು ಪ್ರತಿಪಾದನೆಯಿಲ್ಲದೆ, ಅವರು, ಈ ನ್ಯಾಯಾಲಯದ ಮೂಲಕ, ನೀಡಿದ ಅಂತಿಮ ಡಿಕ್ರಿಯನ್ನು ಪಡೆದುಕೊಳ್ಳಲು ಅರ್ಜಿದಾರರನ್ನು ತಡೆಯುತ್ತಿದ್ದಾರೆ. ಅದಕ್ಕನುಸಾರವಾಗಿ, ಅಂತಿಮ ಡಿಕ್ರಿ ವ್ಯವಹರಣೆಗಳನ್ನು 5,000/– ರೂಪಾಯಿಗಳ ವೆಚ್ಚದ ಮೇಲೆ ಅಂಗೀಕರಿಸಲಾಗಿದೆ ಮತ್ತು ಪ್ರಾರಂಭಿಕ ಡಿಕ್ರಿಯನ್ನು ಅನುಸರಿಸಿ ಅಂತಿಮ ಡಿಕ್ರಿ ಪಡೆದುಕೊಳ್ಳಲು ಕಛೇರಿಗೆ ನಿರ್ದೇಶಿಸಲಾಗಿದೆ. ಕಮೀಷನರ್

ನಕ್ಷೆಯು, ಸಹ ಈ ಅಂತಿಮ ಡಿಕ್ರಿಯ ವಿಭಾಗಾಂಶ ಮತ್ತು ಭಾಗಗಳನ್ನಾಗಿ ಮಾಡಿದೆ. ನ್ಯಾಯಾಲಯದಿಂದ ಮಾಡಿದ ಅಂತಿಮ ಡಿಕ್ರಿ ವ್ಯವಹರಣೆಗಳ ಸದರಿ ಆದೇಶದ ವಿರುದ್ಧ ಅಪೀಲುದಾರರು – ತೀರ್ಪುಋಣಿಗಳು, ಉಭಯ ಪಕ್ಷಕಾರರು ಸುನಾವಣೆಯ ತರುವಾಯ, ಹಿರಿಯ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರ ಮುಂದೆ ಆರ್.ಎ. 7/2013ನ್ನು ದಾಖಲು ಮಾಡಿದ್ದು, ಈ ಅಪೀಲನ್ನು ವಜಾಗೊಳಿಸಲಾಗಿದೆ. ಹಾಗಾಗಿ, ಪ್ರಸ್ತುತ ಅಪೀಲನ್ನು, ತೀರ್ಪುಋಣಿಗಳಿಂದ ದಾಖಲಿಸಲಾಗಿದೆ.

5. ಪಟ್ಟಿ ಮಾಡಲಾದ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ನಾನು ಆಲಿಸಿದ್ದೇನೆ.

6. ಕೆಳ ನ್ಯಾಯಾಲಯಗಳು ಮಾಡಿದ ಡಿಕ್ರಿಯು, ಕಾನೂನಿಗೆ ವಿರುದ್ಧವಾಗಿದೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿ ಉಪಬಂಧಗಳಿಗೆ ವಿರುದ್ಧವಾಗಿದೆ ಹಾಗೂ 54ನೇ ಪ್ರಕರಣದ ತಿದ್ದುಪಡಿಯ ದೃಷ್ಟಿಯಿಂದ, ಕೋರ್ಟು ಕಮೀಷನರ್, ವಿಭಾಗ ಮಾಡುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ. ನ್ಯಾಯಾಲಯ ಮಾತ್ರ, ವಿಭಾಗ ಮಾಡುತ್ತದೆಯೆಂದು ವಾದಿಸುತ್ತಾ ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಯಾದ ಶ್ರೀ ಬಿ.ಎಂ. ಸಿದ್ದಪ್ಪರವರು ಭಾವಾವೇಶವಾಗಿ ವಾದಿಸಿದ್ದಾರೆ. ಆದ್ದರಿಂದ, ಅಂತಿಮ ಡಿಕ್ರಿ ವ್ಯವಹರಣೆಗಳ ನ್ಯಾಯಾಲಯದಿಂದ ಮಾಡಿದ ಆದೇಶವನ್ನು ಸ್ಥಿರೀಕರಿಸಿ ಕೆಳ ಅಪೀಲು ನ್ಯಾಯಾಲಯ ಮಾಡಿದ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯು, ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣಕ್ಕೆ ವಿರುದ್ಧವಾಗಿದೆ ಮತ್ತು ರದ್ದುಪಡಿಸುವುದಕ್ಕೆ ಹೊಣೆಯಾಗುತ್ತಾರೆಯೆಂದು ಅವರು ವಾದಿಸಿದ್ದಾರೆ.

7. ಇದಕ್ಕೆ ವಿರುದ್ಧವಾಗಿ, ಕೆಳ ನ್ಯಾಯಾಲಯಗಳ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯ ನ್ಯಾಯ ಸಮ್ಮತವೆಂದು 1 ಮತ್ತು 2ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಶಶಿಧರರವರು ವಾದಿಸಿದ್ದಾರೆ ಮತ್ತು

ಕೋರ್ಟ್ ಕಮೀಷನರ್‌ರಿಂದ ಮಾಡಿದ ವಿಭಾಗವನ್ನು, ಈ ನ್ಯಾಯಾಲಯ ಮಾಡಿರುವುದಿಲ್ಲವೆಂಬ ಸಂಗತಿಯು ವಿವಾದಗೊಳಿಸದೇ ಸಹ, 1 ಮತ್ತು 2ನೇ ಪ್ರತ್ಯರ್ಜಿದಾರರು, ಯಾವುದೇ ಭಾಗದ ಕಡೆಯಲ್ಲಾಗಲಿ ತೆಗೆದುಕೊಳ್ಳಲು ಒಪ್ಪಿಕೊಂಡಿದ್ದಾರೆಂದು ವಾದಿಸಿದ್ದಾರೆ. ಆದ್ದರಿಂದ, ಅವರು, ಈ ಅಪೀಲನ್ನು ವಜಾಗೊಳಿಸಲು ಕೋರಿದ್ದಾರೆ.

8. ಪ್ರಸ್ತುತ ಅಪೀಲನ್ನು ಅಂಗೀಕರಿಸುವಾಗ, ಈ ನ್ಯಾಯಾಲಯ ಈ ಮುಂದಿನ ಮುಖ್ಯ ಕಾನೂನು ಪ್ರಶ್ನೆಯನ್ನು ರೂಪಿಸಿದೆ:

> "ಸಿವಿಲ್ ಪ್ರಕ್ರಿಯಾ ಸಂಹಿತೆಯ (ತಿದ್ದುಪಡಿ ಮಾಡಲಾದ) 54ನೇ ಪ್ರಕರಣದ ಉಪಬಂಧಗಳ ದೃಷ್ಟಿಯಿಂದ ಕೋರ್ಟ್ ಕಮೀಷ್‌ನರವರಿಂದ ಪ್ರಮುಖವಾಗಿ ಮಾಡಿದ ವಿಭಾಗದ ಆಧಾರದ ಮೇಲೆ ಅಂತಿಮ ಡಿಕ್ರಿ ವ್ಯವಹರಣೆಗಳನ್ನು ಕೆಳ ನ್ಯಾಯಾಲಯಗಳು ಅಂಗೀಕರಿಸಿರುವುದು ನ್ಯಾಯ ಸಮ್ಮತವಾದುದೆ?"

9. ಪಟ್ಟಿ ಮಾಡಲಾದ ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ನಾನು ಕಾಳಜಿಯಿಂದ ಪರಿಗಣಿಸಿದ್ದೇನೆ. ಇದೊಂದು ದುರಾದೃಷ್ಟಕರ ಪ್ರಕರಣವಾಗಿದ್ದು, ಡಿಕ್ರಿಯನ್ನು, 1981ನೇ ವರ್ಷದಲ್ಲಿದ್ದಂತೆ ಬಹಳ ಹಿಂದೆಯೇ ಅದನ್ನು ಮಾಡಲಾಗಿದೆ. ಈ ದಾವೆಯನ್ನು, 1975ನೇ ವರ್ಷದಲ್ಲಿ ದಾಖಲು ಮಾಡಲಾಗಿದೆ. 1981ನೇ ವರ್ಷದಲ್ಲಿ ಡಿಕ್ರಿ ಆದೇಶ ಮಾಡಿದ್ದರೂ ಮತ್ತು ಆರ್.ಎಸ್.ಎ. 727/1991ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದ್ದರೂ, ಇಂದಿನವರೆಗೆ, ಡಿಕ್ರಿಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿ ಮಾಡಲಾದ ಉಪಬಂಧಗಳ ಅಡಿಯಲ್ಲಿ ಉದ್ದೇಶಿಸಲಾದಂತೆ ದಾವೆಯ ಸ್ವತ್ತುಗಳನ್ನು ವಿಭಾಗ ಮಾಡದೇ ಈ ನ್ಯಾಯಾಲಯ ತಪ್ಪು ಮಾಡಿದೆ.

10. ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿಯ ದೃಷ್ಟಿಯಿಂದ, ಭಾಗಗಳು ಅಥವಾ ವಿಭಾಗವನ್ನು, ಯಾವುದೇ ಇದ್ದಲ್ಲಿ, ತಹಸೀಲ್ದಾರ್‌ಗಿಂತ ಕಡಿಮೆಯಿರದ ಕಂದಾಯ ಅಧಿಕಾರಿಯ ವರದಿಯ ಆಧಾರದ ಮೇಲೆ, ಕಾನೂನಿನ ಅನುಸಾರವಾಗಿ ಈ ನ್ಯಾಯಾಲಯದಿಂದ ಮಾಡತಕ್ಕದ್ದು. ಅದು, ಈ ಕೆಳಗಿನಂತಿದೆ:

> ''54 ಸಂಪದದ ವಿಭಜನೆ ಅಥವಾ ಹಿಸ್ಸೆಯ ಪ್ರತ್ಯೇಕೀಕರಣ.–
>
> ಕಂದಾಯವನ್ನು ಸಂದಾಯ ಮಾಡುವುದಕ್ಕಾಗಿ ಕಂದಾಯ ನಿರ್ಧಾರಣೆ ಮಾಡಲಾಗಿರುವ ಒಂದು ಅವಿಭಕ್ತ ಸಂಪದವನ್ನು ವಿಭಜಿಸುವುದಕ್ಕಾಗಿ, ಅಥವಾ ಅಂಥ ಸಂಪದದ ಹಿಸ್ಸೆಯನ್ನು ಪ್ರತ್ಯೇಕವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಿ ಡಿಕ್ರಿಯು ಇರುವಲ್ಲಿ, ಅಂಥ ಸಂಪದಗಳ ವಿಭಜನೆಗೆ ಅಥವಾ ಹಿಸ್ಸೆಗಳ ಪ್ರತ್ಯೇಕೀಕರಣಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ (ಯಾವುದಾದರೂ ಇದ್ದರೆ) ಅನುಸಾರವಾಗಿ ಕಲೆಕ್ಟರನು ಅಥವಾ ಅವನ ಪರವಾಗಿ ಈ ಬಗ್ಗೆ ಅವನಿಂದ ಪ್ರತಿನಿಯೋಜಿತನಾದ ಯಾವನೇ ರಾಜ ಪತ್ರಿತ ಅಧೀನಾಧಿಕಾರಿಯು ಆ ಸಂಪದದ ವಿಭಜನೆಯನ್ನು ಅಥವಾ ಹಿಸ್ಸೆಯ ಪ್ರತ್ಯೇಕೀಕರಣವನ್ನು ಮಾಡತಕ್ಕದ್ದು.''
>
> (ಒತ್ತು ನೀಡಲಾಗಿದೆ.)

11. ದಿನಾಂಕ 1.2.2001 ರಿಂದ ಜಾರಿಯಲ್ಲಿರುವ 1998ರ ಅಧಿನಿಯಮ ಸಂ.36ರ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿಯ ದೃಷ್ಟಿಯಿಂದ, 'ವಿಭಾಗವನ್ನು, ಈ ನ್ಯಾಯಾಲಯದಿಂದ ಮಾತ್ರ ಮಾಡತಕ್ಕದ್ದು ಮತ್ತು ಕಂದಾಯ ಅಧಿಕಾರಿ ಅಥವಾ ಕಮೀಷನರ್‌ರಿಂದ ಅಲ್ಲ' ಎಂಬ ಉಪಬಂಧಗಳ

ತಿದ್ದುಪಡಿಯು ಎಲ್ಲಾ ಮೊಕದ್ದಮೆಗಳಿಗೂ ಅನ್ವಯವಾಗುತ್ತದೆ. ಈ ನ್ಯಾಯಾಲಯ, ಪರಿಣಾಮಕಾರಿ ವಿಭಾಗವಾಗುವುದಕ್ಕೆ ಸಮರ್ಥಗೊಳಿಸಲು ತಹಸೀಲ್ದಾರ್ ದರ್ಜೆಗಿಂತ ಕಡಿಮೆಯಿರದ ಕಂದಾಯ ಅಧಿಕಾರಿಯ ವರದಿಯ ಮೇಲೆ ಅಗತ್ಯವಿದ್ದಲ್ಲಿ, ಅದು, ಅಂಥ ವರದಿಯ ಮೇಲೆ ಪರಿಣಾಮಕಾರಿ ವಿಭಾಗವಾಗುತ್ತದೆ ಮತ್ತು ಕೋರ್ಟ್ ಕಮೀಷನರ್, ವಿಭಾಗವನ್ನು ಮಾಡಲಾಗದು. ಪ್ರಸ್ತುತ ಪ್ರಕರಣದಲ್ಲಿ ಒಪ್ಪಿಕೊಳ್ಳಲಾದಂತೆ, ವಿಭಾಗವನ್ನು, ಕೋರ್ಟ್ ಕಮೀಷನರ್ ರಿಂದ ಮಾಡಲಾಗಿದ್ದು, ನ್ಯಾಯಾಲಯದಿಂದ ಅಲ್ಲ, ಆದ್ದರಿಂದ, ಕಾನೂನಿನ ಮುಖ್ಯ ಪ್ರಶ್ನೆಯು, ಕೋರ್ಟ್ ಕಮೀಷನರ್ ರಿಂದ ಮಾಡಿದ ವಿಭಾಗವನ್ನು ಅಂಗೀಕರಿಸಿದ ಅಂತಿಮ ಡಿಕ್ರಿ ವ್ಯವಹರಣೆಗಳು, ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿ ಮಾಡಲಾದ ಉಪಬಂಧಗಳಿಗೆ ವಿರುದ್ಧವಾಗಿಯೆಂದು ಅಭಿಪ್ರಾಯಪಟ್ಟು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

12. ಒಪ್ಪಿತವಾಗಿರುವಂತೆ, ಕೆಳ ಅಪೀಲು ನ್ಯಾಯಾಲಯದಿಂದ ಮಾಡಿದ, ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯಿಂದ ಕಂಡು ಬರುವಂತೆ, ಅಂತಿಮ ಡಿಕ್ರಿ ವ್ಯವಹರಣೆಗಳಿಂದ ಮಾಡಿದ ಆದೇಶವನ್ನು ಸ್ಥಿರೀಕರಿಸಿದ್ದು, <u>ವಿಭಾಗವನ್ನು, ದಾವೆಯ ಸ್ವತ್ತುಗಳು ಹಾಗೂ ಆರಂಭಿಕ ಡಿಕ್ರಿಯನ್ನು 'ಕೋರ್ಟ್ ಕಮೀಷನ್‌ರವರಿಂದ ವಿಭಾಗ ಮಾಡಲಾಗಿದೆಯೆಂದು</u>, ಅಂತಿಮ ಡಿಕ್ರಿ ವ್ಯವಹರಣೆಗಳ ಆದೇಶದಲ್ಲಿ ಹೇಳಲಾದಂತೆ ಕೋರ್ಟ್ ಕಮೀಷನರ್‌ರಿಂದ ಮಾಡಲಾಗಿದೆ.'

13. ಮೇಲೆ ಹೇಳಲಾದ ಕಾರಣಗಳ ದೃಷ್ಟಿಯಿಂದ, ಹಿರಿಯ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರ ಮುಂದೆ ದಾಖಲು ಮಾಡಿದ್ದ ಆರ್.ಎ. ಸಂ.7/2013 ದಿನಾಂಕ 26.8.2013 ರಲ್ಲಿ ಮಾಡಿದ ಕೆಳ ಅಪೀಲು ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು, ಕೋರ್ಟ್ ಕಮೀಷನರ್‌ರಿಂದ ಮಾಡಿದ ವಿಭಾಗದ ಆಧಾರದ ಮೇಲೆ ಅಂತಿಮ ಡಿಕ್ರಿ ವ್ಯವಹರಣೆಗಳನ್ನು ಅಂಗೀಕರಿಸಿದ್ದು, ಆದೇಶ ದಿನಾಂಕ 5.12.2012ನ್ನು ಸ್ಥಿರೀಕರಿಸಿರುವುದನ್ನು, ರದ್ದುಪಡಿಸಲಾಗಿದೆ. ಆ ವಿಷಯವನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 54ನೇ ಪ್ರಕರಣದ ತಿದ್ದುಪಡಿ ಮಾಡಲಾದ

ಉಪಬಂಧಗಳೊಂದಿಗೆ ಅನುಸಾರವಾಗಿ ಪರಿಣಾಮಕಾರಿ ವಿಭಾಗಕ್ಕಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸುವುದರೊಂದಿಗೆ, ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರಿಗೆ ಪುನರ್ವಿಚಾರಣೆಗಾಗಿ ವಾಪಸ್ಸು ಕಳುಹಿಸಲಾಗಿದೆ.

14. ಡಿಕ್ರಿಯನ್ನು 1981ನೇ ವರ್ಷದಲ್ಲಿ ಮಾಡಲಾಗಿದ್ದರೂ ಮತ್ತು ದಿನಾಂಕ 2.6.1998 ರಂದು ಆರ್.ಎಸ್.ಎ. 727/1991ರಲ್ಲಿ ಈ ನ್ಯಾಯಾಲಯದಿಂದ ಸ್ಥಿರೀಕರಿಸಲಾಗಿದ್ದರೂ ಈ ವಿಷಯವು ಕಳೆದ 37 ವರ್ಷಗಳಿಂದ ಇತ್ಯರ್ಥದಲ್ಲಿ ಇರುವುದನ್ನು ಪರಿಗಣನೆಗೆ ತೆಗೆದುಕೊಂಡಿದ್ದು, ಅಧಿವಿಚಾರಣಾ ನ್ಯಾಯಾಲಯವು, ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಅಂತಿಮ ಡಿಕ್ರಿ ವ್ಯವಹರಣೆಗಳನ್ನು ವಿಲೇ ಮಾಡತಕ್ಕದ್ದು. ಅದಕ್ಕನುಸಾರವಾಗಿ, ಈ ಅಪೀಲನ್ನು, ವಿಲೇ ಮಾಡಲಾಗಿದೆ.

ಉಭಯ ಪಕ್ಷಕಾರರು, ಅಂತಿಮ ಡಿಕ್ರಿ ವ್ಯವಹರಣೆಗಳ ನ್ಯಾಯಾಲಯ, ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಳ್ಳಕೆರೆ ಇವರ ಮುಂದೆ ದಿನಾಂಕ 4.8.2016 ರಂದು ಹಾಜರಾಗಲು ನಿರ್ದೇಶಿಸಲಾಗಿದೆ.